ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ಆದೇಶದಂತೆ ದಿನಾಂಕ: 05.12.2020 ರಂದು ಹಗದೂರು ವಾರ್ಡ್ ನಂ.84ರ ವಾರ್ಡ್ ಕಮಿಟಿಯು ಶ್ರೀ.ಅರುಣ್ ಎಸ್.ಡಿ. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪ್ರಭಾರ) ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

<u>ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು:</u>

1) ಸಹಾಯಕ ಅಭಿಯಂತರರು, ವಾರ್ಡ್ ನಂ.84 ಹಗದೂರು, ಬಿಬಿಎಂಪಿ ಬೆಂಗಳೂರು
2) ಮೆಡಿಕಲ್ ಅಧಿಕಾರಿ, ಆರೋಗ್ಯ ಇಲಾಖೆ -ಹಗದೂರು
3) ಮೆಡಿಕಲ್ ಅಧಿಕಾರಿ, ಆರೋಗ್ಯ ಇಲಾಖೆ -ಸಿದ್ದಾಪುರ
4) ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರು, ಹಗದೂರು ವಾರ್ಡ್ ನಂ.84
5) ಆರೋಗ್ಯ ನಿರೀಕ್ಷಕರು, ಆರೋಗ್ಯ ಇಲಾಖೆ (ಹಗದೂರು)
6) ಗ್ರಾಮಲೆಕ್ಕಿಗರು, ತಾಲ್ಲೂಕು ಕಛೇರಿ (ಇಮ್ಮಡಿಹಳ್ಳಿ)
7) ಸಹಾಯಕ ಕಂದಾಯ ಅಧಿಕಾರಿಗಳು, ವೈಟ್‌ಫೀಲ್ಡ್ ಉಪ ವಿಭಾಗ,
8) ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ
9) ಹಗದೂರು ವಾರ್ಡ್ ಕಮಿಟಿ ಸದಸ್ಯರು ಮತ್ತು ಸಾರ್ವಜನಿಕರು
10) ಮಾರ್ಸಿಯಲ್, ಬಿಬಿಎಂಪಿ ಕೆರೆ ವಿಭಾಗ
11) ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ, ಬಿಬಿಎಂಪಿ
12) ಹಗದೂರು ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು.

**ಸಭೆಯು ಬೆಳಗ್ಗೆ 11:00 ಘಂಟೆಗೆ ಪ್ರಾರಂಭವಾಗಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

1. ಹಗದೂರು ವಾರ್ಡ್ 84ರಲ್ಲಿ ಸಿದ್ದಾಪುರ ಮತ್ತು ಹಗದೂರು ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್-19ರ ಪರೀಕ್ಷೆ ಮಾಡಿಸಲಾಗುತ್ತಿದ್ದು, ಕೊರೋನ ಸೋಂಕಿತರ ಸಂಖ್ಯೆ ಇಳಿಮುಖವಾಗಿರುತ್ತದೆ. ಹಾಗೂ ಸಮಾಜಿಕ ಅಂತರ ಮತ್ತು ಮಾಸ್ಕ್ ಧರಿಸಲು ಸಾರ್ವಜನಿಕರಿಗೆ ತಿಳಿಸಿದ್ದು, ಹಾಗೂ ಕೋವಿಡ್ ಪರೀಕ್ಷೆ ಮಾಡಿಸಲು ಸಾರ್ವಜನಿಕರಿಗೆ ಮತ್ತು ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಮನವಿ ಮಾಡಲಾಯಿತು.

<u>ಕ್ರಮ: ಆರೋಗ್ಯ ಇಲಾಖೆ.</u>

2. ರಸ್ತೆಯ ಪಕ್ಕದಲ್ಲಿರುವ Imperial Hotel n ನವರು ರಾತ್ರಿ 02.00 ಗಂಟೆ ವರಗೂ ಹೋಟೆಲ್ ತೆರೆದು, ಪಾತ್ರೆ ಸಾಮಾನು ತೊಳೆಯುವ ಶಬ್ದದಿಂದ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ದೂರಿರುತ್ತಾರೆ.

<u>ಕ್ರಮ:</u> ಕಾನೂನು ಮತ್ತು ಸುವ್ಯವಸ್ಥೆ, ಪೋಲೀಸ್ ಠಾಣೆ,
ವೈಟ್‌ಫೀಲ್ಡ್

3. ಪ್ರೀಸ್ಟೀಜ್‌ಯಿಂದ - ಪರಿಮಳ ಅಪಾರ್ಟ್‌ಮೆಂಟ್‌ವರೆಗಿನ ಬೋರ್‌ವೆಲ್ ಮುಖ್ಯ ರಸ್ತೆಯಲ್ಲಿ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೆ ಇರುವ ಕುರಿತಾಗಿ ಚರಂಡಿ ವ್ಯವಸ್ಥೆಯ ಸಮಸ್ಯೆಯನ್ನು ಪರಿಹರಿಸಲು ಸಭೆಯಲ್ಲಿ ದೂರಿರುತ್ತರೆ

<u>ಕ್ರಮ:</u> ಸ.ಕಾ.ಅ ರಸ್ತೆ ಮೂಲಭೂತ ಸೌಕರ್ಯ.ಮ.ಪುರ ವಿಭಾಗ

4. ಗಾಂಧೀಪುರ 5ನೇ ಕ್ರಾಸ್‌ನಲ್ಲಿ ಕೊಳವೆ ಬಾವಿಯನ್ನು ರಿಪೇರಿ ಮಾಡಲು ಸಭೆಯಲ್ಲಿ ಸೂಚಿಸಲಾಯಿತು.

ಕ್ರಮ: ವಾರ್ಡ್ ಇಂಜಿನಿಯರ್ -ವಾ-84

5. ಹಗದೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ರಸ್ತೆಗುಂಡಿಗಳನ್ನು ವೆಟ್‌ಮೀಕ್ಸ್‌ನಿಂದ ಮುಚ್ಚಲಾಗುತ್ತಿದ್ದು, ಮಳೆ ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ಡಾಂಬರೀಕರಣವನ್ನು ಮಾಡಲಾಗುತ್ತದೆ. ಹಾಗೂ ಅಲ್ಲಲ್ಲಿ ಉರಿಯದಿರುವ ಬೀದಿ ದೀಪಗಳನ್ನು ರಿಪೇರಿ ಮಾಡಲು ವಿದ್ಯುತ್ ವಿಭಾಗ, ಬಿಬಿಎಂಪಿ ರವರಿಗೆ ದೂರುಗಳನ್ನು ಪ್ರತಿ ದಿನ ಸಲ್ಲಿಸಲಾಗುತ್ತಿದೆ.

ಕ್ರಮ: ವಾರ್ಡ್ ಇಂಜಿನಿಯರ್, / ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ, ಬಿಬಿಎಂಪಿ

6. ಬೋರ್‌ವೆಲ್ ರಸ್ತೆಯಲ್ಲಿ ಬೀದಿ ನಾಯಿಗಳ ಹಾವಳಿಯನ್ನು ತಪ್ಪಿಸಲು ಸಭೆಯಲ್ಲಿ ದೂರಿರುತ್ತಾರೆ.

ಕ್ರಮ: Animal husbandry, BBMP

7. ನಾಗೊಂಡನಹಳ್ಳಿ ದುರ್ಗಶ್ರೀ ಅಪಾರ್ಟ್‌ಮೆಂಟ್ ಹಿಂಭಾಗ ಚರಂಡಿ ನಿರ್ಮಿಸುವ ಕುರಿತು. ಶ್ರೀ.ಭಾಸ್ಕರ್ ಎಂಬುವವರು ದೂರಿರುತ್ತಾರೆ.

ಕ್ರಮ: ವಾರ್ಡ್ ಇಂಜಿನಿಯರ್ -ವಾ84

8. ಪೆಟ್ರೋಲ್ ಬಂಕ್-ದನಮಂದೆ ಹಿಂಭಾಗ ಚರಂಡಿ ಬ್ಲಾಕ್ ಆಗಿರುವ ಬಗ್ಗೆ ಶ್ರೀ.ರಂಗನಾಥ್ ಎಂಬವವರು ದೂರಿರುತ್ತಾರೆ.

ಕ್ರಮ: ವಾರ್ಡ್ ಅಭಿಯಂತರರು.

9. ನಲ್ಲೂರಹಳ್ಳಿ-ಸಿದ್ದಾಪುರ ಸ್ಮಶಾನ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಸೂಚಿಸಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ, ಬಿಬಿಎಂಪಿ

10. ಸಿದ್ದಾಪುರ ಮತ್ತು ಹಗದೂರು ಸರ್ಕಾರಿ ಆಸ್ಪತ್ರೆಗಳಲ್ಲಿ ಕೋವಿಡ್-19ರ ಲಸಿಕೆ ಬರುವ ಹಿನ್ನಲೆಯಲ್ಲಿ ಲಸಿಕೆಗಳನ್ನು ಶೇಖರಿಸಲು ಶೀಥಲೀಕರಣ ನಿರ್ವಹಣೆಗಾಗಿ 1 LR & DE-FRIZER ಗಳಿಗೆ 2KV. UPS ನ್ನು ಒದಗಿಸಲು ಕೋರಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ, ಬಿಬಿಎಂಪಿ

11. ಸಿದ್ದಾಪುರ ಆಸ್ಪತ್ರೆಯಲ್ಲಿ ಕೋವಿಡ್-19ರ ಲಸಿಕೆಗಾಗಿ ಪ್ರತ್ಯೇಕ ಕೊಠಡಿ ನಿರ್ಮಾಣ ಮಾಡಿಕೊಡಲು ಕೋರಿರುತ್ತಾರೆ.

ಕ್ರಮ: ವಾರ್ಡ್ ಅಭಿಯಂತರರು.

ಮಾನ್ಯ ಕಮಿಟಿ ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ನೌಕರರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಹಗದೂರು ವಾರ್ಡ್ ನಂ.84 ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಆಧ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು.

ಹಗದೂರು ವಾರ್ಡ್ ನಂ.84ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ.ಹೆಚ್.ಬಿ.ತಿಪ್ಪೇಸ್ವಾಮಿ, ಸಹಾಯಕ ಅಭಿಯಂತರರು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಕಾರ್ಯದರ್ಶಿ
ಹೆಚ್.ಬಿ.ತಿಪ್ಪೆಸ್ವಾಮಿ
ಸ.ಅ ವಾರ್ಡ್ ನಂ: 84

**ಪ್ರತಿಯನ್ನು:**

1) ಮಾನ್ಯ ಜಂಟಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹದೇವಪುರ ವಲಯ
2) ಮಾನ್ಯ ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹದೇವಪುರ ವಲಯ
3) ಮಾನ್ಯ ಡಿ.ಹೆಚ್.ಓ ಬಿಬಿಎಂಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4) ಎಲ್ಲಾ ಅಧಿಕಾರಿ ಸಿಬ್ಬಂದಿಗಳಿಗೆ ಕ್ರಮಕ್ಕಾಗಿ
5) ಎಲ್ಲಾ ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ
6) ಕಛೇರಿ ಪ್ರತಿ.